ಎನಿಸುತ್ತಿತ್ತು. ಹೀಗೆಯೇ ಮದುವೆ ಮನೆಯಲ್ಲಿ ಭೇಟಿಯಾಗುತ್ತಿದ್ದೆವು. ಹೇಳದೆ ಕೇಳದೆ ಇಬ್ಬರ ಕಣ್ಣುಗಳೂ ಒಬ್ಬರನ್ನೊಬ್ಬರು ಹುಡುಕುತ್ತಿದ್ದವು, ಮಾತನಾಡುತ್ತಿದ್ದವು. ತಾನು ಮಾಡುತ್ತಿದ್ದ ಡೆಕೋರೇಷನ್ ಅನ್ನು ಇಷ್ಟ ಪಟ್ಟವಳು ಕಂಜೂಸಿ ಮಾಡದೆ ಹೊಗಳುತ್ತಿದ್ದಳು. ಮದುವೆ ಮನೆಯಲ್ಲಿ ಅವಳಿಗೆ ಪನ್ನೀರು ಹಾಕುವ, ಗುಲಾಬಿ ಹೂ ಕೊಡುವ, ಬೀಡಾ ಕಟ್ಟಿ ಕೊಡುವ ಕೆಲಸ ಕೊಡುತ್ತಿದ್ದರು. ಮದುವೆ ಮನೆಗಳಲ್ಲಿ ಅವಳು ಕೊಟ್ಟ ಬೀಡಾ ತಿಂದೇ ಹೊಟ್ಟೆ ತುಂಬಿಸಿಕೊಂಡಿದ್ದಿದೆ. ಮದುವೆ ಮನೆಯಲ್ಲಿ ಶುರುವಾದ ಪರಿಚಯ, ಸ್ನೇಹ ಪಾರ್ಕಿನಲ್ಲಿ, ಪಾನಿಪೂರಿ ಅಂಗಡಿಯಲ್ಲಿ ಮುಂದುವರಿಯಿತು, ಇಬ್ಬರೂ ಸೇರಿಕೊಂಡು ಹೆಣೆದ ಕನಸುಗಳನ್ನು ಗುಡ್ಡೆ ಹಾಕಿದರೆ ಒಂದು ದೊಡ್ಡ ಲಾರಿ ತುಂಬುತ್ತದೆ. ಅದರಲ್ಲೊಂದು ದೊಡ್ಡ ಕಲ್ಯಾಣ ಮಂದಿರದಲ್ಲಿ ಮದುವೆ. ಕನಸಿನಲ್ಲಿ ಮದುವೆಯೂ ಆಯಿತು, ಮಕ್ಕಳೂ ಆದವು. ಆದರೆ ನಮ್ಮ ಕನಸು ಕನಸಾಗಿಯೇ ಉಳಿದು ಮದುವೆಯ ಸೀಸನ್ ಮುಗಿಯಿತು. ಮತ್ತೆ ನಾಲ್ಕಾರು ತಿಂಗಳು ಅವಳನ್ನು ಕಾಣಲಾಗಲಿಲ್ಲ, ಅವಳಿಂದ ಫೋನ್ ಬರುವುದು ನಿಂತಿತು, ಮೊಬೈಲ್ ನಂಬರ್ ಅಸ್ತಿತ್ವದಲ್ಲಿಲ್ಲ ಎನ್ನುವ ಉತ್ತರ ಬಂತು. ಅವಳನ್ನು ಕಾಣದೆ ಮನಸ್ಸು ಚಡಪಡಿಸತೊಡಗಿತು, ಕಡೆಗೊಂದು ದಿನ ಅವಳನ್ನು ನೋಡಿದೆ. ಊರಿನ ಮಧ್ಯದಲ್ಲಿರುವ ಕಲ್ಯಾಣ ಮಂಟಪವೊಂದರಲ್ಲಿ ಮಂಟಪಕ್ಕೆ ಹೂವಿನ ಡೆಕೋರೇಷನ್ ಮಾಡುವ ಜವಾಬ್ದಾರಿ ನನ್ನದಾಗಿತ್ತು... ಸಿಂಗರಿಸಿದ ಮಂಟಪದಲ್ಲಿ ಕಾಲಿಟ್ಟಿದ್ದು ಕುಸುಮಾ, ಅವಳಿಗೆ ತಾಳಿ ಕಟ್ಟಿದ್ದು ಒಬ್ಬ ಟೊಣಪ, ಗಿಡುಗನ ಮುಂದೆ ಗಿಳಿಯ ಜೋಡಿಯಂತಿತ್ತು ಅವರದ್ದು. ಅವನ ಕುತ್ತಿಗೆ ಮತ್ತು ಬೆರಳಿನಲ್ಲಿರುವ ಚಿನ್ನ ಅವನೆಷ್ಟು ಶ್ರೀಮಂತ, ಅವಳ್ಯಾಕೆ ತನ್ನನ್ನು ಮರೆತು ಅವನನ್ನು ಮದುವೆಯಾದಳು ಎನ್ನುವುದನ್ನು ಹೇಳುತ್ತಿತ್ತು, ಕಣ್ಣು ತುಂಬಿ ಬಂದರೂ ತನ್ನವಳೆಂದುಕೊಂಡಿದ್ದ ಕುಸುಮಾಳ ಮದುವೆಗೆ ಮಂತ್ರಾಕ್ಷತೆ ಹಾಕಿದೆ. ಎಲ್ಲವೂ ನೆನಪಾಗುತ್ತಿದ್ದಂತೆ ಪರಮೇಶ್ವರ ಕಣ್ಣೀರು ಒರೆಸಿಕೊಂಡ.

ಅಂದು 'ಅವನಿ ರೆಸಾರ್ಟ್'ನಲ್ಲಿ ಹಿಂದಿನ ದಿನದ ರಿಸೆಪ್ಶನ್ ಗೌಜು ಮುಗಿದು ಮದುವೆಯ ಸಂಭ್ರಮ ಶುರುವಾಗಿತ್ತು, ಅಲಂಕಾರ ಹಿಂದಿನ ದಿನದ್ದೇ. ಅಲ್ಲಲ್ಲಿ ಸಿಕ್ಕಿಸಿದ್ದ ಬಣ್ಣ ಬಣ್ಣದ ಪರದೆಗಳು ಇನ್ನೂ ಹಾರಾಡಿಕೊಂಡಿದ್ದವು. ಹೂಗಳು ಸ್ವಲ್ಪ ಬಾಡಿದ್ದವು, ಆದರೆ ಕಟ್ಟಿದ ಕೆಲವು ಬಲೂನುಗಳು ಅನಾಥವಾಗಿ ನೆಲದಲ್ಲಿ ಉರುಳಾಡುತ್ತಿದ್ದವು. ಕುರ್ಚಿಯ ಕೆಳಗೆ ಅಲ್ಲಿ, ಇಲ್ಲಿ ಕಾಫಿ, ಟೀ ಕುಡಿದ ಕಪ್ಪುಗಳು ಹೊರಳಾಡುತ್ತಿದ್ದವು. ಸರಿಯಾಗಿ 10 ಗಂಟೆ 58 ನಿಮಿಷಕ್ಕೆ ಮದುಮಗ, ಮದುಮಗಳಿಗೆ ತಾಳಿ ಕಟ್ಟಿ ಸತಿ-ಪತಿಯರಾದರು. ಮದುವೆಗೆ ಬಂದವರು ಲಾನ್‌ನಲ್ಲಿ ಕಟ್ಟಿದ್ದ ಅಲಂಕಾರ ಮಾಡಿದ ಉಯ್ಯಾಲೆ, ಸ್ವಿಮ್ಮಿಂಗ್ ಪೂಲಿನ ಹತ್ತಿರ ನಿಂತು, ಕೂತು ಫೋಟೊ ತೆಗೆದುಕೊಳ್ಳುತ್ತಿದ್ದರು.

ಮೂಲೆಯಲ್ಲಿ ಬೋಗನ್‌ವಿಲ್ಲಾ ಗಿಡವೊಂದಿತ್ತು. ಅದರಡಿಯಲ್ಲಿ ಬೋಗನ್‌ವಿಲ್ಲಾ ಹೂಗಳ ಚಾಪೆ ಹರಡಿತ್ತು, ಕಣ್ಣು ಕುಕ್ಕುವ ಬಣ್ಣವಿದ್ದರೂ ಪರಿಮಳವಿಲ್ಲದ ಹೂಗಳು. ಅಲ್ಲೇ ಜೋಡಿಯೊಂದು ನಿಂತಿತ್ತು. 'ಹನಿಮೂನಿಗೆ ಸ್ವಿಡ್ಜರಲ್ಯಾಂಡಿಗೆ ಹೋಗುವುದಾದರೆ ಮಾತ್ರ ನಿನ್ನನ್ನು ಮದುವೆಯಾಗ್ತೇನೆ ರವಿ... ಹಾಂ ಕಿರಣ್ ಸಹ ಕಳೆದ ವಾರ ಪ್ರಪೋಸ್ ಮಾಡಿದ್ದಾನೆ, ನಾನು ಏನೂ ಹೇಳದೆ ಪೆಂಡಿಂಗ್ ಇಟ್ಟಿದ್ದೇನೆ' ಜೀನ್ಸ್ ತೊಟ್ಟ ಹುಡುಗಿ ಮುಖಕ್ಕೆ ಬರುತ್ತಿದ್ದ ಕೂದಲನ್ನು ಬದಿಗೆ ಸರಿಸುತ್ತಾ ಎಂದಾಗ ಅವನೆಂದ– 'ಅಯ್ಯೋ ವಿದೇಶಿ ಪ್ರವಾಸ ಮಾಡುವಷ್ಟು ಬ್ಯಾಂಕ್ ಬ್ಯಾಲೆನ್ಸ್ ಇಲ್ಲ, ಕಾಶ್ಮೀರಕ್ಕೆ ಹೋಗೋಣ. ಅದು ನಿನ್ನ ಸ್ವಿಡ್ಜರಲ್ಯಾಂಡಿಗಿಂತ ಚೆಂದ ಇದೆ ಕಣೇ, ನಮ್ಮ ಪ್ರೀತಿಗೆ, ಮದುವೆಗೆ ಸ್ವಿಡ್ಜರಲ್ಯಾಂಡ್ ಅಡ್ಡಿಯಾ?'

'ರವೀ... ನಾವಿಬ್ಬರೂ ಡೇಟಿಂಗ್ ಮಾಡಿದ್ದೆವು ಎನ್ನುವುದನ್ನು ಮರೆತು ಬಿಡು. ಹಾಗೆ ನೋಡಿದರೆ ಮರೆಯುವುದು ಸುಲಭ, ನಿನ್ನ ಬ್ಯಾಂಕ್ ಬ್ಯಾಲೆನ್ಸಿಗೆ ತಕ್ಕ ಹುಡುಗಿಯೇ ಸಿಗ್ತಾಳೆ ಬಿಡು, ಆಲ್ ದಿ ಬೆಸ್ಟ್' ಎನ್ನುತ್ತಾ ಹೋದಳು.

ಸುಜಾತ ಅದೇ ಹಳೆಯ ಸೀರೆಯುಟ್ಟು ತೊಳೆಯಲಿಟ್ಟಿದ್ದ ಮುಸುರೆ ಪಾತ್ರೆಯ ಹತ್ತಿರ ನಿಂತಿದ್ದಳು, ಕಣ್ಣು ಕೆಂಪಗಾಗಿ ನೀರಾಡುತ್ತಿತ್ತು. ಹತ್ತಿರ ಬಂದ ಪರಮೇಶ್ವರನೆಂದ 'ಮದುವೆ ದಿನವಾದರೂ ಸ್ವಲ್ಪ ಚೆನ್ನಾಗಿ ಡ್ರೆಸ್ ಮಾಡ್ಕೋಳೊದಲ್ವಾ? ಇಲ್ಲೇನು ನೀರು ಕಮ್ಮಿಯಾಗಿದೆ ಅಂತ ಕಣ್ಣೀರು ಸುರಿಸಿ ಬಕೆಟ್ ತುಂಬಿಸ್ತಿದ್ಯಾ?' ಸುಜಾತ ಮಾತಾಡದೆ ಎತ್ತಲೋ